# ಹೊಸ ವರ್ಷಕ್ಕೆ ಹೊಸ ಆಸೆಗಳೊಡನೆ...

ಮನುಕುಲ ಕಲೆಯ ಮೂಲಕ ಮಾತನಾಡಲು ಆರಂಭಿಸಿದ ಕ್ಷಣ ರೋಮಾಂಚನವೆಂಬ ಪದ ಹುಟ್ಟಿಕೊಂಡಿತು. ಕಲಾಸೃಷ್ಟಿ ಸರಳವೋ ಸಂಕೀರ್ಣವೋ ಏನಾದರೂ ಆಗಿರಲಿ, ಆ ರೋಮಾಂಚನ ಮನುಕುಲವನ್ನು ಇನ್ನೂ ಬೆಚ್ಚಗಿಡುತ್ತಿದೆ. ಕೆಲವರು ಮಾತ್ರ ಸೃಷ್ಟಿಸುವ ಕಲೆಯನ್ನು ಎಲ್ಲರಿಗೆ ಅರ್ಥೈಸುವ ಬಗೆ ಹೇಗೆ? ಕಲೆಯಲ್ಲಿ ಅಭಿರುಚಿ ಮೂಡಿಸುವುದು ಹೇಗೆ? ಕಲಾಮೀಮಾಂಸೆಯ ಸುದೀರ್ಘ ಪರಂಪರೆ, ಕಾಲದ ಪರಿಕರಗಳನ್ನು ಒಳಗೊಳ್ಳುತ್ತ ಬೆಳೆಯುತ್ತಲೇ ಇದೆ. ಇದು ಅಂತ್ಯವಿಲ್ಲದ ಅನುಸಂಧಾನ.

ಸಾಂಸ್ಕೃತಿಕ ಮಾಸಪತ್ರಿಕೆಯಾದ ‘ಮಯೂರ’ ಲಲಿತಕಲೆಗಳಿಗೆ ನೀಡುವ ಆದ್ಯತೆ ನಿಮಗೂ ಮೆಚ್ಚುಗೆಯಾಗಿದೆ. ಹೊಸ ವರ್ಷದ ಈ ಮೊದಲ ಸಂಚಿಕೆಯಿಂದ ಕೆ.ಎಸ್. ಶ್ರೀನಿವಾಸ ಮೂರ್ತಿ ಅವರು ‘ಅಪಾರದರ್ಶಿಕೆ’ ಎಂಬ ಹೊಸ ಅಂಕಣದಲ್ಲಿ ಕಲೆ ಬಗೆವ ಬಗೆಯನ್ನು ಕುರಿತು ಬರೆಯಲಿದ್ದಾರೆ. ಕಲಾಮೀಮಾಂಸೆಯನ್ನು ಕುರಿತ ಲೇಖನಗಳು, ಅಂಕಣಗಳನ್ನು ಪ್ರಕಟಿಸುವ ಮೂಲಕ ಕನ್ನಡಿಗರ ಸಂವೇದನೆಗೆ ಇನ್ನಷ್ಟು ಸೂಕ್ಷ್ಮತೆಗಳನ್ನು ಜೋಡಿಸುವ ಕೆಲಸವನ್ನು ‘ಮಯೂರ’ ತನ್ಮಯತೆಯಿಂದ ಮಾಡುತ್ತದೆ.

ಜಗತ್ತಿನ ಸಾಹಿತ್ಯದಲ್ಲಿ ಏಕಾಂತದಿಂದ ಲೋಕಾಂತಕ್ಕೆ ಸಾಗುವ ಆತ್ಮಕಥೆಗಳ ಅದ್ಭುತ ವೈವಿಧ್ಯವಿದೆ. ವ್ಯಕ್ತಿಗಳ ಸ್ವಂತಕಥೆಯ ನೆಪದಲ್ಲಿ ಜನಾಂಗ, ಸಮಾಜ, ದೇಶಗಳ ಕಥೆಗಳನ್ನೇ ಹೇಳುವ, ಹಲವು ಭಾಷೆಗಳಿಂದ ಆಯ್ದ ಅಂಥ ಆತ್ಮಕಥೆಗಳ ಆಯ್ದ ಭಾಗಗಳನ್ನು ‘ಅಂತರ್ಜಲ’ ಹೊಸ ಅಂಕಣದಲ್ಲಿ ನಿಮ್ಮ ಮುಂದಿಡಲಿದ್ದೇವೆ. ಹಾಗೆಯೇ ‘ಮಯೂರ’ದ ಮತ್ತೊಂದು ನೆಚ್ಚಿನ ಆದ್ಯತೆಯಾದ ಚಲನಚಿತ್ರ ಸಂಸ್ಕೃತಿಯನ್ನು ಕುರಿತ ಹೊಸ ಅಂಕಣ ‘ಬೆಳ್ಳಿತೊರೆ’ ಯಲ್ಲಿ ‘ವಸ್ತು–ವಿಷಯ’ ದ ಮೂಲಕ ಸಾಮಾಜಿಕ ವ್ಯಾಖ್ಯಾನ ನಡೆಸುವ ಪ್ರಯತ್ನ ಇರಲಿದೆ.

ನಾಲ್ಕೂವರೆ ದಶಕಗಳ ‘ಮಯೂರ’ ದಲ್ಲಿ ವರ್ಣರಂಜಿತ ನೆನಪಿನ ‘ನವಿಲುಗರಿ’ ಗಳು ನೂರಾರಿವೆ. ಅವುಗಳನ್ನು ಆಯ್ದು ಮತ್ತೆ ನೇವರಿಸುವುದು, ವಿಮರ್ಶೆಯ ಹೊಸ ಮೆರುಗು ಸೇರಿಸುವುದು ನಮಗೆ ಸಂತೋಷದ ಸಂಗತಿ. ಕನ್ನಡದ ಪುಟಾಣಿ ಓದುಗರಿಗೆ ‘ಪರಿಸರ ಪಾಠ’ ದ ಹೊಸ ತರಗತಿಯೂ ಆರಂಭವಾಗಿದೆ. ಇಷ್ಟೇ ಅಲ್ಲ, ಮಯೂರದ ಲಾಸ್ಯಕ್ಕೆ ಮತ್ತಷ್ಟು ಹೊಸ ಲಯ ಸೇರಲಿದೆ.

**–ಆರ್. ಪೂರ್ಣಿಮಾ**

